ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಕೆಲಸಗಳನ್ನು ಜಿಲ್ಲಾಪರಿಷತ್ತಿನ ಮೂಲಕ ನಾವು ಮಾಡಿಸುತ್ತಿದ್ದೇವೆ. ಇದರ ಬಗ್ಗೆ ಇಲ್ಲಿಯವರೆಗೆ ಯಾವ ಕಂಪ್ಲೇಂಟ್ ಬಂದಿಲ್ಲ. ಈಗ ತಾವು ಹೇಳುತ್ತಿದ್ದೀರಿ, ಇದರ ಬಗ್ಗೆ ಸೂಕ್ತ ಆದೇಶ ಕೊಡುತ್ತೇನೆ. ಎಲ್ಲೆಲ್ಲಿ ಕಳಪೆ ಕೆಲಸವಾಗಿದೆಯೋ ಅದನ್ನು ಒಳ್ಳೆಯ ರೀತಿಯಿಂದ ಮಾಡುವುದಕ್ಕೆ ಅಥವಾ ದುರಸ್ತಿ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದು ಸೀಮಿತವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕೇಳಿದ್ದಾರೆ. ಈ ಕಪ್ಪು ಹಲಗೆ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ನೂರಾರು ಕಂಪ್ಲೇಂಟ್ಸ್ ಇವೆ. ಈ ಕೆಲಸವನ್ನು ಲ್ಯಾಂಡ್ ಆರ್ಮಿನವರು ಮತ್ತು ಬೇರೆ ಇಲಾಖೆಗಳ ಮೂಲಕ ಮಾಡಿಸಿರುತ್ತಾರೆ. ಈ ಕೆಲಸಗಳು ಕಳಪೆ ಮಟ್ಟದಲ್ಲಿ ಆಗಿವೆ. ಇವುಗಳ ಬಗ್ಗೆ ಅನೇಕ ದೂರುಗಳು ಬಂದಿವೆ. ಕೆಳದರ್ಜೆ ಹೆಂಚುಗಳನ್ನು ತಂದುಹಾಕಿದ್ದಾರೆ. ಅನೇಕ ಕಡೆ ಈ ಕಟ್ಟಡಗಳು ಬಿದ್ದುಹೋಗಿವೆ. ಅದಕ್ಕೋಸ್ಕರ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ, ಏನು ಕಳಪೆ ಕೆಲಸವನ್ನು ಮಾಡಿಸಿರುತ್ತಾರೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಮತ್ತೆ ಈ ರೀತಿಯ ಕೆಲಸವಾಗದಂತೆ ಮಾಡಬೇಕು. ಸಂಬಂಧಪಟ್ಟ ಇಲಾಖೆಯವರು ಹಣವನ್ನು ದುರುಪಯೋಗ ಮಾಡಿದ್ದಾರೆ. ಇವರಿಗೆ ಹೇಳುವವರು, ಕೇಳುವವರು ಯಾರೂ ಇಲ್ಲ ಎಂದು ವರ್ತನೆ ಮಾಡಿದ್ದಾರೆ. ದಯಮಾಡಿ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಬೇಕು. ಇದು ಇಡೀ ರಾಜ್ಯದಲ್ಲಿರುವಂಥ ಸಮಸ್ಯೆ. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇದರ ಬಗ್ಗೆ ಅನೇಕ ಸಲ ಚರ್ಚೆಯಾಯಿತು. ಅನೇಕ ಕಂಪ್ಲೇಂಟ್ಸ್‌ನ್ನು ನಾವು ಬರವಣಿಗೆಯಲ್ಲಿ ಕೊಟ್ಟಿದ್ದೇವೆ. ಆದ್ದರಿಂದ ಇದರ ಬಗ್ಗೆ ತನಿಖೆ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಸಲಹೆ ಕೊಟ್ಟಿದ್ದಾರೋ, ಅದನ್ನು ಪರಿಶೀಲಿಸುತ್ತೇವೆ. ಲ್ಯಾಂಡ್ ಆರ್ಮಿಯವರು ಕಟ್ಟಿರುವ ಕಡೆಗಳಲ್ಲಿ ಕೆಲವು ಕಡೆ ಕಳಪೆ ಕೆಲಸ ಆಗಿದೆ. ಆದರೆ, ಈಗ ಸ್ಪೆಸಿಫಿಕ್ ಆಗಿ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಪ್ರಶ್ನೆ ಸೀಮಿತವಾಗಿರುವುದರಿಂದ ಬೇರೆ ಜಿಲ್ಲೆಗಳ ಮಾಹಿತಿಗಳು ನನ್ನ ಹತ್ತಿರ ಇಲ್ಲ. ಆದರೂ ತಾವು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು, ಸರಿಯಾದ ಇನ್‌ಸ್ಟ್ರಕ್ಷನ್ ಕೊಡುತ್ತೇನೆ.

ಶ್ರೀ ಎನ್.ಜಿ. ನಾಯಕ್ : ನನ್ನ ಕ್ಷೇತ್ರದಲ್ಲೂ ಲ್ಯಾಂಡ್ ಆರ್ಮಿಯವರು ಕಟ್ಟಿರುವ ಕಟ್ಟಡಗಳ ಕೆಲಸ ಕಳಪೆಯಾಗಿದೆ. ಇದನ್ನೂ ಸರಿ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಶ್ರೀಮತಿ ಮೋಟಮ್ಮ : ಈ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಕಟ್ಟಿರುವ ಕಟ್ಟಡಗಳ ಸಮಸ್ಯೆ ಬರೀ ಒಂದು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಕಡೆಯೂ ಇದೇ ಸಮಸ್ಯೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಕಟ್ಟಡಗಳು ಮಂಜೂರಾದ ಕಡೆ ಕಟ್ಟದೆ ಬೇರೆ ಕಡೆ ಕಟ್ಟಿದ್ದಾರೆ.

ರೇಷ್ಮೆ ವಿನಿಮಯ ಕೇಂದ್ರದ ಬಗ್ಗೆ

ಅಧ್ಯಕ್ಷರು : ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಇದು ಸೀಮಿತವಾಗಿದೆ.

441. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಚ್ಚಾ ರೇಷ್ಮೆ ನೂಲಿನ ಪ್ರಮಾಣವೆಷ್ಟು?

ಆ) ರಾಜ್ಯದಲ್ಲಿ ಕಚ್ಚಾ ರೇಷ್ಮೆ ನೂಲು ಪ್ರತಿದಿನ ರೇಷ್ಮೆ ವಿನಿಮಯ ಕೇಂದ್ರಕ್ಕೆ ಎಷ್ಟು ಟನ್ ಬರುತ್ತದೆ.?

ಇ) ರಾಜ್ಯದ ಕಚ್ಚಾ ರೇಷ್ಮೆ ನೂಲು ರೇಷ್ಮೆ ವಿನಿಮಯ ಕೇಂದ್ರಕ್ಕೆ ರೇಷ್ಮೆ ನೂಲು ಬರದೆ ಹೊರಗಡೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಅದನ್ನು ತಡೆಯುವುದಕ್ಕೆ ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ರಾಜ್ಯ ರೇಷ್ಮೆ ಸಚಿವರು):–

ಅ) 6076 ಮೆಟ್ರಿಕ್ ಟನ್‌ಗಳು

ಆ) ಸುಮಾರು 10 ಟನ್‌ಗಳು

ಇ) ಹೌದು

ಈ) ಇಲಾಖೆಯ ಕಾಯಿದೆ ಜಾರಿ ವಿಭಾಗದವರಿದಂ ಕರ್ನಾಟಕ ರೇಷ್ಮೆ ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ವಿತರಣೆ ಮತ್ತು ಮಾರಾಟ) ನಿಯಮಾವಳಿ – 1959 ರೀತ್ಯಾ ರೇಷ್ಮೆ ವರ್ತಕರ ರೇಷ್ಮೆ ಹುರಿಮಾರಾಟಗಾರರ ಮತ್ತು ನೇಕಾರರ ಲೆಕ್ಕ ಪತ್ರಗಳನ್ನು ತನಿಖೆ ಮತ್ತು ತಾಳೆ ನೋಡುವ ಕ್ರಮ ತೀವ್ರತೆರದಲ್ಲಿ ಕೈಗೊಂಡಿದೆ.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಅಧ್ಯಕ್ಷರೇ, ಕಚ್ಚಾ ರೇಷ್ಮೆ, ವಿನಿಮಯ ಕೇಂದ್ರಕ್ಕೆ ಬರದೆ ಹೊರಗಡೆ ತುಂಬಾ ಮಾರಾಟವಾಗುತ್ತಿದೆ. ಅದನ್ನು ತಡೆಯುವುದಕ್ಕೆ ಕಾಯಿದೆ ಏನು ಮಾಡಿದ್ದೀರೆಂದರೆ, ನಿಯಮ 59ರ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಆ ಪ್ರಕಾರವಾಗಿ ಕಾನೂನು ತಂದರೂ ಕೂಡಾ ಇವತ್ತಿನ ದಿವಸ ಲಕ್ಷಾಂತರ ರೂಪಾಯಿ ಬೆಲೆ ಬಾಳುವಂಥ ರೇಷ್ಮೆ ನೂಲುಗಳು ವಿನಿಮಯ ಕೇಂದ್ರಕ್ಕೆ ಬರದೆ ಹೊರಗಡೆ ಮಾರಾಟವಾಗುತ್ತಿದೆ. ಅದರ ಬಗ್ಗೆ ತೀವ್ರತರ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರಕ್ಕೆ ಬರತಕ್ಕಂಥ ಆದಾಯದಲ್ಲಿ ಮುಕ್ಕಾಲು ಪಾಲು ಸೋರಿಹೋಗುತ್ತದೆ. ಹೊಸ ಹೊಸ ಕಾನೂನು ತಂದರೂ ಕೂಡಾ ವರ್ತಕರು ಮತ್ತು ಕಚ್ಚಾ ರೇಷ್ಮೆ ಮಾರುವಂಥವರು ಕಾನೂನುಗಳಿಗೆ ಹೊಂದಿಕೊಳ್ಳುತ್ತಿಲ್ಲ. ಆದ್ದರಿಂದ ಹೆಚ್ಚಿನ ರೀತಿಯಲ್ಲಿ ಕಾನೂನುಗಳನ್ನು ತಂದು ಸರ್ಕಾರಕ್ಕೆ ಆದಾಯ ಬರುವಂತೆ ಮಾನ್ಯ ಸಚಿವರು ಕ್ರಮತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಇಲಾಖೆಯಲ್ಲಿ ಎನ್‌ಫೋರ್ಸ್‌ಮೆಂಟ್ ವಿಭಾಗ ಎಂದು ಏನು ಇದೆ, ಈ ಒಂದು ಇಲಾಖೆಯಿಂದ ಈಗಾಗಲೇ ನಾನಾ ರೀತಿಯ ಕಾರ್ಯಕ್ರಮಗಳನ್ನು ಈ ರೇಷ್ಮೆ ಹೊರಗಡೆ ಹೋಗತಕ್ಕದ್ದನ್ನು ತಪ್ಪಿಸುವ ವಿಚಾರದಲ್ಲಿ ತೀವ್ರವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ವಿಶೇಷವಾಗಿ ಒಂದು ಮಾತನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇಲ್ಲಿಯವರೆಗೆ ಸಹ ನಮ್ಮ ಎನ್‌ಫೋರ್ಸ್‌ಮೆಂಟ್ ಇಲಾಖೆ ಬಂದ ಮೇಲೆ ಏನು ರೇಷ್ಮೆಯನ್ನು ಕದ್ದು ತೆಗೆದುಕೊಂಡು ಹೋಗುತ್ತಿದ್ದರು, ಯಾರು ಎಕ್ಸ್‌ಛೇಂಜಿಗೆ ಬರುತ್ತಾ ಇರಲಿಲ್ಲ; ಅವರು ಅಕಸ್ಮಾತ್ ಬಿಲ್ ಇಲ್ಲದೇ ಸಿಕ್ಕಿದಾಗ, ಅದನ್ನು ಹಿಡಿದು ಅದರ ಮೇಲೆ ಫೈನ್ ಮಾತ್ರ ಹಾಕಿ ಬಿಟ್ಟು ಬಿಡುಗಡೆ ಮಾಡುತ್ತಿದ್ದೆವು. ನಾವು ಈಗ ಏಪ್ರಿಲ್‌ನಿಂದ ಈಚೆಗೆ ಇಂತಹ ಅನಧಿಕೃತ ಮಾರಾಟವು ಕಂಡು ಬಂದಾಗ, ಯಾವುದೇ ಬಿಲ್ ಇಲ್ಲದೇ ಇರತಕ್ಕ ರೇಷ್ಮೆ ಮೇಲೆ ಏನೂ ಸಿಕ್ಕದೇ ಹೋದಾಗ ಅವರು ಯಾವುದೇ ಡಾಕ್ಯುಮೆಂಟ್ಸ್ ಪ್ರೊಡ್ಯೂಸ್ ಮಾಡದೇ ಹೋದಾಗ, ಅಂದರೆ ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಕೆಲವು ನಾರ್ಮ್ಸ್‌ಗಳನ್ನು ಏನು ಫಿಕ್ಸ್ ಮಾಡಿದ್ದೇವೆ; ಇಂತಿಂಥ ಡಾಕ್ಯುಮೆಂಟ್ಸ್ ಇರಬೇಕು ಎಂದು. ಸಿಲ್ಕ್ ಎಕ್ಸ್‌ಛೇಂಜಿಗೆ ಬರಬೇಕಾದಂತಹ ಸಂದರ್ಭದಲ್ಲಿ ಪಾಸ್ ಬುಕ್ ತರಬೇಕು; ಇದರ ಜೊತೆ ಇಷ್ಟು ರೇಷ್ಮೆ ಪ್ರೊಡೆಕ್ಷನ್ ಮಾಡಿದ್ದಾರೆ ಅದರ ಡಿಟೇಲ್ಸ್ ತರಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅವರು ಏನನ್ನೂ ಪ್ರೊಡ್ಯೂಸ್ ಮಾಡದೇ ಇದ್ದ ಸಂದರ್ಭದಲ್ಲಿ ಸಿಕ್ಕಿದಂತಹ ಸಿಲ್ಕನ್ನು ನಾವು ಮುಟ್ಟುಗೋಲು ಮಾಡಿದ್ದೇವೆ; ಅಲ್ಲಿಯವರೆಗೆ ಹೋಗಿದ್ದೇವೆ. ಎಲ್ಲಿಯವರೆಗೆ ಹೋಗಿದ್ದೇವೆ ಎಂದರೆ, ಒಬ್ಬ ಸಾಮಾನ್ಯ ರೀಲರ್ ರೇಷ್ಮೆ ತಂದು ಸಣ್ಣ ವೀವರ್, ಟ್ವಿಸ್ಟರ್ ರೇಷ್ಮೆಯ ಸರಿಯಾದ ಅಕೌಂಟ್ಸ್ ಕೊಡದೇ ಹೋದಾಗ ಫೈನ್ ಹಾಕುವುದರ ಜೊತೆಗೆ ಇವೊತ್ತು ಅವನ ರೇಷ್ಮೆಯನ್ನು ನಮ್ಮ ಸರ್ಕಾರಕ್ಕೆ ಮುಟ್ಟುಗೋಲು ಹಾಕುವಂತಹ ಒಂದು ಉಗ್ರವಾದ ಕಾರ್ಯಕ್ರಮವನ್ನು ನಮ್ಮ ಸರ್ಕಾರದ ಮತಿಯಿಂದ ತೆಗೆದುಕೊಂಡಿದ್ದೇವೆ. ಆದರೂ ಈ ಒಂದು ವ್ಯವಸ್ಥೆ ಅನಿಶ್ಚಯತೆ ನಮ್ಮ ರೇಷ್ಮೆ ಇಲಾಖೆಯಲ್ಲಿ ನಡೆಯುತ್ತಾ ಇದೆ. ಇದರ ಬಗ್ಗೆ ನಾನಾದರೂ ಒಂದು ಮಾತನ್ನು ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಹೇಳುವುದಾದರೆ, ಇವೊತ್ತು ನಮ್ಮ ರಾಜ್ಯ ಸರ್ಕಾರ ಹೋದ ಏಪ್ರಿಲ್ ತಿಂಗಳಲ್ಲಿ ಹೊಸದಾಗಿ ಒಂದು ಟ್ಯಾಕ್ಸೇಷನ್ ಅನ್ನು ತಂದಿದೆ. ಅದು ರಾಜ್ಯದ ಹಿತದೃಷ್ಟಿಯಿಂದ ತಂದಿರತಕ್ಕ ಟ್ಯಾಕ್ಸ್, ರಾಜ್ಯದ ಕಲ್ಯಾಣ ಅಭಿವೃದ್ಧಿಗೋಸ್ಕರ ತಂದಿರತಕ್ಕ ಟ್ಯಾಕ್ಸ್ . ಇದರಲ್ಲಿ ಕೆಲವು ಹಿತಾಸಕ್ತಿಗಳು ಸೇರಿಕೊಂಡು ಇದರ ಬಗ್ಗೆ ಕೆಟ್ಟ ತರವಾದ ಒಂದು ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ; ನಮ್ಮ ರಾಜ್ಯದಲ್ಲಿ ದಯವಿಟ್ಟು ಎಲ್ಲಾ ಟ್ರೇಡರ್ಸ್ ಮತ್ತು ಎಲ್ಲಾ ವ್ಯಾಪಾರಸ್ಥರೂ ಸಹ ಇದರಲ್ಲಿ ಸಹಕರಿಸಬೇಕು ಎಂದೂ, ಸರ್ಕಾರದ ಶ್ರೇಯೋಭಿವೃದ್ಧಿ ಜೊತೆ ಈ ಒಂದು ಇಲಾಖೆಗೆ ಅನುಕೂಲ ಮಾಡಿಕೊಟ್ಟು ಬಿಸಿನೆಸ್‌ನಲ್ಲಿ ನಾವು ಏನು ಎನ್‌ಫೋರ್ಸ್‌ಮೆಂಟ್ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ಅವರು ತೋಳು ಕೊಟ್ಟು ಸಹಕರಿಸಬೇಕೆಂದು ಟ್ರೇಡರ್ಸ್ ಅನ್ನು ಕೇಳಿಕೊಳ್ಳುವುದರ ಜೊತೆಗೆ ನಮ್ಮ ಸರ್ಕಾರದ ಮತಿಯಿಂದ ನಾನಾ ರೀತಿಯಾದ ಇನ್ನೂ ಇತರೇ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆಂದು ಹೇಳುತ್ತೇನೆ.

ಅಧ್ಯಕ್ಷರು :– ಯಾವ ಉಪ ಪ್ರಶ್ನೆಗೂ ಅವಕಾಶ ಇಲ್ಲದೆ ಹಾಗೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಎ.ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ರೇಷ್ಮೆ ನೂಲು ಹೊರಗಡೆ ಹೋಗುವುದಕ್ಕೆ ಈ ಟ್ಯಾಕ್ಸೇಷನ್ ಒಂದು ಕಾರಣವೆಂದು ತಿಳಿಸಿದ್ದಾರೆ. ಈ ಟರ್ನ್ ಓವರ್ ಟ್ಯಾಕ್ಸ್‌ನ್ನು ಸರ್ಕಾರ ಪುನರ್ ಪರಿಶೀಲನೆ ಮಾಡುತ್ತದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಿ. ಮುನಿಯಪ್ಪ :– ಮಾನ್ಯ ಹಣಕಾಸಿನ ಸಚಿವರಿಗೆ ಸಂಬಂಧಪಟ್ಟ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು : ಇದನ್ನು ಪರಿಶೀಲನೆ ಮಾಡಿ.

ಶ್ರೀ ವಿ. ಮುನಿಯಪ್ಪ : ಇದರ ಬಗ್ಗೆ ನಾನು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : ಈಗ ನಮ್ಮ ಮಾನ್ಯ ಮಂತ್ರಿಗಳು ಹೇಳಿದರು ಪರಿಶೀಲನೆ ಮಾಡುತ್ತೇನೆ ಎಂದು. ನಾನು ಸಭಾಧ್ಯಕ್ಷರ ಮೂಲಕ ಹೇಳುತ್ತೇನೆ. ಇವರು ಶಾಸಕರಾಗಿದ್ದ ಕಾಲದಲ್ಲಿ ಈ ಎರಡು ಪರ್ಸೆಂಟ್ ತೆಗೆದು ಹಾಕಬೇಕೆಂದು ನಿಯೋಗ ಹೋಗಿರತಕ್ಕದ್ದನ್ನು ತಮ್ಮ ಮೂಲಕ ಅವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅಂದ ಮಾತ್ರಕ್ಕೆ ಅವರ ಮೇಲೆ I am not casting any aspersions. ಆದ್ದರಿಂದ ಇವೊತ್ತು ಹೊರಗಡೆ ರೇಷ್ಮೆ ಹೋಗುವುದು, ಈ ಎರಡು ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದರಿಂದ ಎನ್ನುವ ಮಾತನ್ನು ಸರ್ಕಾರ ಮತ್ತು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಯೇ?

ಶ್ರೀ ವಿ. ಮುನಿಯಪ್ಪ : ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರ ಸರ್ಕಾರದ ಗಮನದಲ್ಲಿ ಖಂಡಿತವಾಗಿ ಇದೆ. ಅದನ್ನು ನಾವು ತೀವ್ರವಾಗಿ ಗಮನದಲ್ಲಿಟ್ಟುಕೊಂಡಿದ್ದೇನೆ

366. ಶ್ರೀ ಕೆ.ಹೆಚ್. ಕುರಡಗಿ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಆರಕ್ಷಕ ಇಲಾಖೆಯಲ್ಲಿರುವ ಅಧೀಕ್ಷ ಆರಕ್ಷಕರುಗಳು, ಉಪ–ಅಧೀಕ್ಷಕ ಆರಕ್ಷಕರುಗಳ ಹಾಗೂ ವೃತ್ತ ನಿರೀಕ್ಷಕರುಗಳ ಹುದ್ದೆಗಳು.

419. ಶ್ರೀ ಕ್ಯಮರುಲ್ ಇಸ್ಲಾಮ್ (ಗುಲ್ಬರ್ಗಾ),– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪೋಲೀಸ್ ಅಧೀಕ್ಷಕರು, ಉಪಾಧೀಕ್ಷಕರು ಮತ್ತು ವೃತ್ತ ನಿರೀಕ್ಷಕರುಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅವರುಗಳ ಪೈಕಿ ಮುಸ್ಲಿಂ ಜನಾಂಗಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ ಎಷ್ಟು?

ಇ) ಪೋಲೀಸ್ ಅಧೀಕ್ಷಕರು, ಉಪಾಧೀಕ್ಷಕರು, ವೃತ್ತ ನಿರೀಕ್ಷಕರುಗಳ ಪೈಕಿ ಕಾರ್ಯನಿರ್ವಾಹಕ ಮತ್ತು ಕಾರ್ಯನಿರ್ವಾಹಕ ರಹಿತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು? ಅವರುಗಳ ಪೈಕಿ ಮುಸ್ಲಿಂ ಜನಾಂಗಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ ಎಷ್ಟು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):–

ಅ)	(1)	ಪೋಲೀಸ್ ಅಧೀಕ್ಷಕರು (ಐಪಿಎಸ್)	:	38
	(2)	ಪೋಲೀಸ್ ಅಧೀಕ್ಷಕರು	:	24
	(3)	ಪೋಲೀಸ್ ಉಪಾಧೀಕ್ಷಕರು	:	148
	(4)	ಪೋಲೀಸ್ ವೃತ್ತ ನಿರೀಕ್ಷಕರು	:	415
	(1)	ಪೋಲೀಸ್ ಅಧೀಕ್ಷಕರು (ಐಪಿಎಸ್)	:	4
	(2)	ಪೋಲೀಸ್ ಅಧೀಕ್ಷಕರು	:	3
	(3)	ಪೋಲೀಸ್ ಉಪಾಧೀಕ್ಷಕರು	:	7
	(4)	ಪೋಲೀಸ್ ವೃತ್ತ ನಿರೀಕ್ಷಕರು	:	39

ಒಟ್ಟು ಬಲ ಮುಸ್ಲಿಂ ಬಲ